ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಲೋ ಇರಿಗೇಷನ್ ಮತ್ತು ಲಿಫ್ಟ್ ಇರಿಗೇಷನ್‌ನನ್ನು ಕೋಡಿ ಕೆಲಸ ಮುಗಿದ ತಕ್ಷಣ ತೆಗೆದುಕೊಳ್ಳಬೇಕೆಂದು ಬರೆದಿಲ್ಲ. ಆದರೆ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. ಇದರಿಂದ 25,000 ಎಕರೆಗಳು ನೀರಾವರಿಯಾಗುತ್ತವೆ. ಆದರೆ ನಾವು ಆಲ್ಲಿ ಇನ್ನೂ 45 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಆ ಹಣವನ್ನು ಖರ್ಚು ಮಾಡುವುದಕ್ಕೆ ನಮ್ಮಿಂದ ಸಾಧ್ಯವಾಗುತ್ತಿಲ್ಲ. ಹಣಕಾಸಿನ ಮುಗಟ್ಟು ಕೂಡ ಇದೆ. ಆದ್ದರಿಂದ ಸರ್ಕಾರದವರು ಈಗ ಲಿಫ್ಟ್ ಇರಿಗೇಷನ್ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಸ್. ಕಾಳಮರಿಗೌಡ.—ಮಾನ್ಯ ಅಧ್ಯಕ್ಷರೇ, ಈ ಲಿಫ್ಟ್ ಇರಿಗೇಷನ್ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಹಣವಿಲ್ಲವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ತೆಗೆದು ಕೊಳ್ಳುವ ರಸ್ತೆ ಕಾಮಗಾರಿಗಳ ಕೆಲಸವನ್ನು ನಿಲ್ಲಿಸಿ ಅದಕ್ಕೆ ಕೊಡುವ ಹಣವನ್ನು ಈ ಯೋಜನೆಗೆ ತೆಗೆದು ಕೊಳ್ಳುತ್ತಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರ ಸಲಹೆ ಉತ್ತಮವಾಗಿದೆ. ಆದರೆ ನಾವು ನಮ್ಮ ಇಲಾಖೆಯಿಂದ ಒಂದು ತಾಲ್ಲೂಕಿಗೆ ಮಂಜೂರು ಮಾಡತಕ್ಕಂಥ ಹಣ ಕೇವಲ 15–20 ಲಕ್ಷ ರೂಪಾಯಿಗಳು. ಆಷ್ಟು ಹಣದಲ್ಲಿ ಈ ಯೋಜನೆಯನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈಗ ಆ ಯೋಜನೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ರೈತರಿಂದ ಸರ್ಕಾರಕ್ಕೆ ಕಾಂಟ್ರಿಬ್ಯೂಷನ್ ಕಲೆಕ್ಟ್ ಮಾಡಿಕೊಟ್ಟರೆ ಆಗ ನಾವು ಪರಿಶೀಲನೆ ಮಾಡಬಹುದು.

ವಿಷಯ : ಮಲಪ್ರಭಾ ನದಿಗೆ ಮಹದಾಯಿ ನದಿಯನ್ನು ಕೂಡಿಸುವ ವಿಚಾರ.

ಪ್ರ. 280 (136) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) .—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :

(ಅ) ಮಲಪ್ರಭಾ ಯೋಜನೆಯ ಕೆಳಗೆ ಬರುವ ಜಮೀನಿಗೆ ಹೆಚ್ಚಿನ ನೀರೊದಗಿಸುವುದಕ್ಕಾಗಿ ಮಹದಾಯಿ ನದಿಯನ್ನು ಮಲಪ್ರಭೆಗೆ ಕೂಡಿಸುವ ವಿಚಾರ ಸರಕಾರದವರೆ ಗಮನದಲ್ಲಿದೆಯೇ ;

(ಆ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರದವರು ಕೈಗೊಂಡ ಕ್ರಮವೇನು ಮತ್ತು ಈಗ ಅದು ಯಾವ ಹಂತದಲ್ಲಿದೆ ;

(ಇ) ಆದಷ್ಟು ಶೀಘ್ರ ಈ ಯೋಜನೆಯನ್ನು ಪ್ರಾರಂಭಿಸುವುದಕ್ಕೆ ಸರಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) .—

(ಅ) ಆಹುದು.

(ಆ) ಅನ್ವೇಶಣೆಯ ಹಂತದಲ್ಲಿದೆ.

(ಇ) ಸವಿಸ್ತಾರ ಅನ್ವೇಶಣೆಯು ಮುಗಿದ ನಂತರ, ಯೋಜನೆಯು ತಾಂತ್ರಿಕವಾಗಿ ಸಾಧುವೆಂದು ಕಂಡುಬಂದಲ್ಲಿ, ಹಣಕಾಸು ಲಭ್ಯತೆಯನ್ನವಲಂಬಿಸಿ, ಅಗತ್ಯ ಕ್ರಮವನ್ನು ಕೈಗೊಳ್ಳಲಾಗುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಈ ಮಹದಾಯಿ ನದಿಯನ್ನು ಮಲಪ್ರಭಾ ಯೋಜನೆಗೆ ಕೂಡಿಸಬೇಕೆಂದು ಬಹಳ ವರ್ಷಗಳಿಂದ ಒಂದು ಪ್ರಪೋಸಲ್ ಸರ್ಕಾರದ ಮುಂದೆ ಇತ್ತು. ಇದು ವಿದ್ಯುಚ್ಛಕ್ತಿ, ಇಲಾಖೆಯವರ ಜೊತೆಗೆ ಮತ್ತು ನೀರಾವರಿ ಇಲಾಖೆಯ ಜೊತೆಗೆ ಚರ್ಚೆಯಾಗಬೇಕಾಗಿರುವುದರಿಂದ ಇನ್ನೂ ತೀರ್ಮಾನವಾಗದೇ ಇತ್ತು. ಆದರೆ ನಾನು ಕೇಳಿಕೊಳ್ಳುವುದಿಷ್ಟೆ, ಈಗಿರತಕ್ಕಂಥ ಅಚ್ಚು ಕಟ್ಟು ಪ್ರದೇಶಕ್ಕೆ ಮಲಪ್ರಭಾ ಯೋಜನೆಯ ಡ್ಯಾಮ್‌ನಿಂದ ಬರುವ ನೀರು ಸಾಕಾಗುವುದಿಲ್ಲ. ಎರಡನೆಯ ದಾಗಿ, ಸೌದತ್ತಿ, ರಾಮದುರ್ಗ, ಬಾದಾಮಿ ತಾಲ್ಲೂಕುಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗತಕ್ಕಂಥ ತಾಲ್ಲೂಕುಗಳು. ಆಗಿರುವುದರಿಂದ, ವಿಶೇಷವಾಗಿ ಈ ಹಿಂದುಳಿದಿರತಕ್ಕಂಥ ತಾಲ್ಲೂಕುಗಳಿಗೆಈ ಯೋಜನೆಯಿಂದ ಸಹಾಯವಾಗುತ್ತದೆ. ಆದಕ್ಕಾಗಿ ಮಹದಾಯಿ ನದಿಯನ್ನು ನವಿಲು ತೀರ್ಥಕ್ಕೆ ಕೂಡಿಸಿಕೊಂಡರೆ ಹೆಚ್ಚಿನ ಪ್ರಯೋಜನವಾಗುತ್ತದೆ. ಈ ಬಗ್ಗೆ ಇನ್‌ವೆಸ್ಟಿಗೇಷನ್ ತಡವಾದರೂ ಇದರಲ್ಲಿ ಸರ್ಕಾರದ ನಿಲುವು ಏನಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ನದಿ, ಪಶ್ಚಿಮದಿಕ್ಕಿನಲ್ಲಿ ಹರಿಯತಕ್ಕಂಥದ್ದು ಏನು ಇದೆ ಇದರಿಂದ ಪವರ್ ಜನರೇಷನ್ ಮಾಡತಕ್ಕಂಥದ್ದು ಸಾಧು ಇದೆ ಎಂದು ಒಂದು ಹಂತದಲ್ಲಿ ನಿರ್ಧಾರ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಸರ್ಕಾರೀ ಆಜ್ಞೆ 13–7–1978 ರಂದು ಹೊರಟು ಇದನ್ನು ಪವರ್ ಪ್ರಾಜೆಕ್ಟ್ ಮಾಡಬೇಕು ಎನ್ನುವುದರ ಮೇಲೆ ಆವೊತ್ತಿನ ಸರ್ಕಾರ ನಿರ್ಧಾರ ಮಾಡಿತ್ತು. ಇದನ್ನು ಪವರ್ ಪ್ರಾಜೆಕ್ಟ್‌ಗೆ ಬದಲಾಗಿ ಒಂದು ನೀರಾವರಿ ಪ್ರಾಜೆಕ್ಟ್ ಮಾಡಿದರೆ ಆ ಭಾಗದ ಜನರಿಗೆ ನೀರನ್ನೊದಗಿಸುವ ದೃಷ್ಟಿಯಿಂದ ಹಾಗೂ ಉಪಯುಕ್ತವಾಗಬಹುದು ಎನ್ನುವ ದೃಷ್ಟಿಯಿಂದ ಅದನ್ನು ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಸೂಚನೆ ಕೊಟ್ಟಿದೆ. ಅದೇ ರೀತಿ ಪರಿಶೀಲನೆ ನಡೆಸಿದ್ದಾರೆ. ಒಂದನೆಯದು, ನಾವು ಈ ನೀರನ್ನು ಡೈವರ್ಟ್ ಮಾಡತಕ್ಕ ಕಾಲದಲ್ಲಿ ಮೇಲ್ಭಾಗದ ಪ್ರದೇಶದಲ್ಲಿ 95 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನೇರವಾಗಿ ಇರಿಗೇಷನ್

ಮಾಡಬಹುದು ಎನ್ನುವ ಅಭಿಪ್ರಾಯವಿದೆ. ಮತ್ತೊಂದು 7 ಟಿ.ಎಂ.ಸಿ.ಎಫ್. ನೀರನ್ನು ನಾಲೆಗೆ ಕೊಟ್ಟು ಉಳಿದದ್ದನ್ನು 32 ಕೋಟಿ 65 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಲಿಫ್ಟ್ ಇರಿಗೇಷನ್ ಮಾಡಬಹುದೆಂದು ತಜ್ಞರ ಅಭಿಪ್ರಾಯವಿದೆ. ನಾನು ಆ ಭಾಗದಲ್ಲಿ ಹೋಗಿ ನೋಡಿದ್ದೇನೆ. ಒಟ್ಟಾರೆ ಅಲ್ಲಿ ಸಾರ್ವಜನಿಕ ಅಭಿಪ್ರಾಯ ಏನಿದೆ ಅಂದರೆ ಅದನ್ನು ನೀರಾವರಿ ಯೋಜನೆಯನ್ನಾಗಿ ಮಾಡಬೇಕೆಂದು ತುಂಬಾ ಒತ್ತಾಯವಿದೆ. ಕೆಲವರು ಹೇಳಿದ ಹಾಗೆ ಆದರಿಂದ ಬರಗಾಲ ಪ್ರದೇಶಕ್ಕೆ ನೀರು ಒದಗಿಸಿದರೆ ಅಲ್ಲಿನ ಜನರ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ. ಆದ್ದರಿಂದ ಆದಕ್ಕೆ ತುಂಬಾ ಒತ್ತಡವಿದೆ. ಸರ್ಕಾರ ಹಿಂದೆ ಮಾಡಿರತಕ್ಕಂಥ ಆರ್ಡರ್‌ಗಳನ್ನು ಇನ್ನೂ ಜಾರಿ ಮಾಡಿಲ್ಲ; ಒಟ್ಟಾರೆ ನೀರಿನ ಸೌಲಭ್ಯಕ್ಕಾಗಿ ಅಲ್ಲಿ ದೊರೆಯತಕ್ಕ ನೀರನ್ನು ಉಪಯೋಗಿಸುವುದು ಉಚಿತ ಎನ್ನುವ ಅಭಿಪ್ರಾಯ ಇದೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆಯ ಕಾಲಾವಧಿ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು.

SRI A. LAKSHMISAGAR.—Sir I beg to Place on the Table of the House the Eighteenth List of Written answers.

ವಿಷಯ. : ದಾವಣಗೆರೆಯಲ್ಲಿ ವಿಮಾನ ಇಳಿದಾಣ ಸ್ಥಾಪನೆಯ ಬಗ್ಗೆ.

ಪ್ರ. 125 (20) ಶ್ರೀ ಕುಬೇರಪ್ಪ ಹ. ಕುರುಡಗಿ (ಮಂಡರಗಿ) .—ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ—:

(ಅ) ದಾವಣಗೆರೆಯ ವಿಮಾನ ಇಳಿದಾಣದ ಬಗ್ಗೆ ಯೋಜನೆಯನ್ನು ಯಾವ ವರ್ಷ ತಯಾರಿಸಲಾಯಿತು.

(ಆ) ಇದಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ;

(ಇ) ಅದನ್ನು ತೆಗೆದು ಕರ್ನಾಟಕ ವಿದ್ಯುತ್ ಮಂಡಲಿಯವರಿಗೆ ಆ ಜಾಗವನ್ನು ಕೊಡಲು ಕಾರಣಗಳೇನು ;

(ಈ) ಜಿಲ್ಲೆಗೊಂದು ವಿಮಾನ ನಿಲ್ದಾಣ ಮಾಡಬೇಕೆಂಬ ಯೋಜನೆ ಪ್ರಕಾರ ಚಿತ್ರದುರ್ಗ ಜಿಲ್ಲೆಯಲ್ಲಿ ಯಾವ ವಿಮಾನ ಇಳಿದಾಣ ಇಲ್ಲದಿರುವುದರಿಂದ ಸರ್ಕಾರದವರು ದಾವಣಗೆರೆಯಲ್ಲಿ ಇಳಿದಾಣ ಒಂದನ್ನು ನಿರ್ಮಿಸುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) .—

(ಅ) ವಿಮಾನ ನಿಲ್ದಾಣದ ಬಗ್ಗೆ ಯೋಜನೆಯನ್ನು 1955 ರಲ್ಲಿ ತಯಾರಿಸಲಾಯಿತು.

(ಆ) ಐವತ್ತೈದು ಸಾವಿರ ರೂಪಾಯಿಗಳು ಖರ್ಚಾಗಿವೆ.

(ಇ) 220 ಕೆ.ವಿ. ರಿಸೀವಿಂಗ್ ಸ್ಟೇಷನ್ ನಿರ್ಮಿಸುವುದರ ಸಲುವಾಗಿ ಕೊಡಲಾಯಿತು.

(ಈ) ಸದ್ಯ ಜಿಲ್ಲೆಗೊಂದು ವಿಮಾನ ನಿಲ್ದಾಣ ಮಾಡಬೇಕೆಂಬ ಯೋಜನೆ ಸರ್ಕಾರದ ಮುಂದಿಲ್ಲ.

ವಿಷಯ .— ಹಾಸನ ಜಿಲ್ಲೆಯ ಲೋಕೋಪಯೋಗಿ ಇಲಾಖೆಯಲ್ಲಿ ನಡೆದಿದ್ದ ಬಗ್ಗೆ.

ಪ್ರ. 136 (101) ಶ್ರೀ ಜಿ. ಬಸಪ್ಪ (ಹೊಸದುರ್ಗ) .—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಹಾಸನ ಜಿಲ್ಲೆ ವಿಭಾಗದ ಲೋಕೋಪಯೋಗಿ ಇಲಾಖೆಯಲ್ಲಿ ನಡೆದಿದ್ದ ಅಕ್ರಮಗಳ ಬಗ್ಗೆ ಆಯೋಗ ತನಿಖೆ ನಡೆಸಿ ಸರ್ಕಾರಕ್ಕೆ ಯಾವಾಗ ವರದಿ ಸಲ್ಲಿಸಲಾಯಿತು ;

(ಆ) ಸರ್ಕಾರದವರು ಆ ವರದಿಯ ಮೇಲೆ ತೀರ್ಮಾನ ಇದುವರೆಗೆ ಮಾಡದಿರಲು ಕಾರಣಗಳೇನು ;

(ಇ) ಇದರಿಂದ ವಿಚಾರಣೆಗೆ ಒಳಗಾಗಿದ್ದ ನೌಕರರಿಗೆ ಬಡ್ತಿ ದೊರೆಯದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು) .—

(ಅ) ಜಾಗೃತ ಆಯೋಗ ತನಿಖಾವರದಿಯನ್ನು ದಿನಾಂಕ 13-11-1973 ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು.

(ಆ) ಆಯೋಗ ಸಲ್ಲಿಸಿದ ತನಿಖಾವರದಿಯನ್ನು ಪರಿಶೀಲಿಸಿ ದಿನಾಂಕ 10-7-1974 ರ ಸರ್ಕಾರಿ ಆದೇಶಗಳ ಸಂಖ್ಯೆ ಪಿಡಬ್ಯೂಡಿ 187 ಎಸ್‌ಡಿಎ 73 ರ ರೀತ್ಯಾ ಸಿಸಿಎ ನಿಯಮಗಳ (ವಿಂಗಡಣಾ, ನಿಯಂತ್ರಣಾ ಮತ್ತು ಮೇಲ್ಮನವಿ ನಿಯಮಗಳು) 14-ಎ ನಿಯಮದ ಮೇರೆಗೆ 53 ಪ್ರಕರಣಗಳನ್ನು ರಾಜ್ಯ ಜಾಗೃತ ಆಯೋಗಕ್ಕೆ ವಿಚಾರಣೆ ಮತ್ತು ವರದಿಗಾಗಿ ಪಹಿಸಲಾಯಿತು. ರಾಜ್ಯ ಜಾಗೃತ ಆಯೋಗವು ವಿವರವಾದ ವಿಚಾರಣೆ ನಡೆಸಿದ ತರುವಾಯ 53 ಪ ಕರಣಗಳ ವಿಚಾರಣಾ ವರದಿಯನ್ನು ಜಾಗೃತ ಕಮಿಷನರ್‌ರವರ ಶಿಫಾರಸ್ಸಿನೊಂದಿಗೆ ದಿನಾಂಕ 3-2-1978 ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ವಿಚಾರಣಾ ವರದಿ ಹಾಗೂ ಜಾಗೃತ ಕಮೀಷನರ್‌ರವರ ಶಿಫಾರಸ್ಸುಗಳನ್ನು ಪರಿಶೀಲಿಸಿ ಸರ್ಕಾರವು ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಳ್ಳುವ